# ಕೆರೆ ಸಮ್ಮೇಳನದಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳು

ಅಂಕೋಲಾ : ಕೆನರಾ ವೆಲ್‌ಫೇರ್ ಟ್ರಸ್ಟಿನ ಪಿ.ಎಂ. ಹೈಸ್ಕೂಲಿನ ವಿದ್ಯಾರ್ಥಿಗಳಾದ ರಾಘವೇಂದ್ರ ವಿ. ನಾಯಕ ಮತ್ತು ಸಚಿನ ಎಂ. ಗಾಂವಕರ ಇವರು ಭಾರತೀಯ ವಿಜ್ಞಾನ ಸಂಸ್ಥೆಯವರು ಶಿರಸಿಯಲ್ಲಿ ನಡೆಸಿದ ರಾಷ್ಟ್ರ ಮಟ್ಟದ ಕೆರೆ ಸಮ್ಮೇಳನದಲ್ಲಿ ಭಾಗವಹಿಸಿ ಉತ್ತಮ ಸಾಧನೆಯನ್ನು ಮಾಡಿದ್ದಾರೆ.

ಈ ಕೆರೆ ಸಮ್ಮೇಳನದಲ್ಲಿ ವಿದ್ಯಾರ್ಥಿಗಳು ಸಹ್ಯಾದ್ರಿ ಯುವ ಪರಿಸರ ವಿಜ್ಞಾನಿ ಪ್ರಶಸ್ತಿ ಪಡೆದು ಶಾಲೆಗೆ ಕೀರ್ತಿಯನ್ನು ತಂದಿರುತ್ತಾರೆ. ಇವರಿಗೆ ವಿಜ್ಞಾನ ಶಿಕ್ಷಕರಾದ ವಿ.ಎಂ. ನಾಯ್ಕರವರು ಮಾರ್ಗದರ್ಶನ ನೀಡಿದ್ದರು. ಇವರ ಸಾಧನೆಗೆ ಪ್ರಾಚಾರ್ಯರಾದ ರವೀಂದ್ರ ವಿ. ಕೇಣಿ, ಸಹಾಯಕ ಮುಖ್ಯಾಧ್ಯಾಪಕ ಪ್ರಕಾಶ ಮಲ್ಯ, ಎನ್.ಸಿ.ಸಿ. ಕಮಾಂಡರ ಜಿ.ಆರ್. ತಾಂಡೇಲ ಹಾಗೂ ಶಿಕ್ಷಕ ಸಿಬ್ಬಂದಿಗಳು ಅಭಿನಂದನೆಯನ್ನು ಸಲ್ಲಿಸಿದ್ದಾರೆ.

